ವಿಷಯ : ರಾಜ್ಯದಲ್ಲಿಯ ಚಿಕ್ಕ ನೀರಾವರಿಯ ವಿವರಗಳ ಕುರಿತಾಗಿ.

ಪ್ರ. 98 (176) ಶ್ರೀ ಪಿ. ರಾಮಚಂದ್ರರಾವ್ (ಉಳ್ಳಾಲ) .— ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ನಮ್ಮ ರಾಜ್ಯದ ಒಟ್ಟು ನೀರಾವರಿ ಪ್ರದೇಶದಲ್ಲಿ ಸಣ್ಣ ನೀರಾವರಿಯಿಂದಲೇ ನೀರಾವರಿ ಆಗುವ ಪ್ರದೇಶ ಎಷ್ಟು ಮತ್ತು ಪ್ರತಿ ಶತ ಒಟ್ಟು ನೀರಾವರಿಯಲ್ಲಿ ಎಷ್ಟು ಪ್ರಮಾಣ ಸಣ್ಣ ನೀರಾವರಿ ಇದೆ :

(ಆ) ಸಣ್ಣ ನೀರಾವರಿಯ ವಿವಿಧ ವಿಧಾನಗಳಿಂದ ನಮ್ಮ ರಾಜ್ಯದಲ್ಲಿ ನೀರಾವರಿಯಾಗಬಹುದಾದ ಪ್ರದೇಶ ಎಷ್ಟು ;

(ಇ) ಈ ಸಣ್ಣ ನೀರಾವರಿಯ ಒಟ್ಟು ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಸರಕಾರದವರು ನಾಲ್ಕು ಪ್ರಾದೇಶಿಕ ಕೈಗಾರಿಕಾ ಕಾರ್ಪೊರೇಷನ್‌ಗಳನ್ನು ರಚಿಸುವ ಯೋಜನೆ ಮೂಡಿಬಂದು ಸರಕಾರದವರ ಗಮನಕ್ಕೆ ಬಂದಿದೆಯೆ ;

(ಈ) ಸಣ್ಣ ನೀರಾವರಿಗೆ ಅದ್ಯತೆ ನೀಡಿ ಸಾಲ ಸೌಲಭ್ಯಗಳ ಮೂಲಕ ಮತ್ತು ಸರಕಾರದವರ ಕಾಮಗಾರಿಗಳ ಮೂಲಕ ತೀವ್ರವಾಗಿ ಅದನ್ನು ವಿಸ್ತರಿಸಲು ಸರಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

(ಅ) ಸಣ್ಣ ನೀರಾವರಿಯಿಂದಲೇ ನೀರಾವರಿ ಆಗುವ ಪ್ರದೇಶ 8·95 ಲಕ್ಷ ಹೆಕ್ಟೇರುಗಳು. ಒಟ್ಟು ನೀರಾವರಿಯಲ್ಲಿ ಸಣ್ಣ ನೀರಾವರಿ ಪ್ರಮಾಣ ಪ್ರತಿ ಶತ 45 (ಇದರಲ್ಲಿ ಅಂತರ್ಜಲ ಸಂಪನ್ಮೂಲ ಸೇರಿಲ್ಲ).

(ಆ) ಸುಮಾರು 12 ಲಕ್ಷ ಹೆಕ್ಟೇರುಗಳು (ಅಂತರ್ಜಲ ಬಿಟ್ಟು).

(ಇ) ಇಲ್ಲ.

(ಈ) ಸಾಲ ಸೌಲಭ್ಯಗಳನ್ನೊದಗಿಸುವುದು ಈ ಇಲಾಖೆಗೆ ಸಂಬಂಧಪಟ್ಟಿಲ್ಲ. ಸಣ್ಣ ನೀರಾವರಿಯನ್ನು ಅಭಿವೃದ್ಧಿಪಡಿಸಲು ಕೈಗೊಂಡಿರುವ ಕ್ರಮಗಳು :

(1) ಈಗಾಗಲೇ ತೆಗೆದುಕೊಂಡಿರುವ ಕೆಲಸಗಳನ್ನು ತೀವ್ರವಾಗಿ ಪೂರ್ಣಗೊಳಿಸುವಿಕೆ ;

(2) ಹೊಸದಾಗಿ ಸಾಲಿನಲ್ಲಿ 387 ಕೆಲಸಗಳನ್ನು ತೆಗೆದುಕೊಳ್ಳಲು ಉದ್ದೇಶಿಸಿರುವುದು :

(3) 68 ಹೊಸ ಕೆಲಸಗಳನ್ನು ವಿಶ್ವಬ್ಯಾಂಕಿನ ನೆರವಿನಿಂದ ತೆಗೆದುಕೊಂಡಿರುವುದು.

ವಿಷಯ : ಮಂಗಳೂರಿನಲ್ಲಿ ಉರವಲು ಕಟ್ಟಿಗೆ ಅಭಾವ.

ಪ್ರ. 99 (175) ಶ್ರೀ ಪಿ. ರಾಮಚಂದ್ರರಾವ್ (ಉಳ್ಳಾಲ) .— ಮಾನ್ಯ ಅರಣ್ಯ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಸರ್ಕಾರದವರ ಅಂದಾಜಿನ ಪ್ರಕಾರ ಮಂಗಳೂರು ನಗರದ ಉರವಲು ಕಟ್ಟಿಗೆಯ ಒಟ್ಟು ಅಗತ್ಯ ಎಷ್ಟು ?

(ಆ) ಮಂಗಳೂರು ನಗರದ ವಿವಿಧ ಕಟ್ಟಿಗೆ ಡಿಪೋಗಳಲ್ಲಿ 83ನೇ ಜನವರಿಯಿಂದ ಸಾರ್ವಜನಿಕರಿಗೆ ದೊರೆತ ಕಟ್ಟಿಗೆಯ ಪ್ರಮಾಣ ಎಷ್ಟು ;

(ಇ) ಮಂಗಳೂರು ನಗರದ ಕಟ್ಟಿಗೆ ಡಿಪೋಗಳಿಂದ ನಗರದ ಹೊರಗಿನ ಪ್ರದೇಶಗಳಿಗೆ (ಉದಾ : ಪಡೀಲಿಗೆ) ಕೊಂಡೊಯ್ಯುವುದು ಮತ್ತು ಇದು ನಗರದ ನಿವಾಸಿಗಳಿಗೆ ಸೌದೆ ಕೊರತೆಗೆ ಕಾರಣವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಈ) ಈ ರೀತಿಯ ಸೌದೆ ಅಭಾವವನ್ನು ತಡೆಗಟ್ಟಲು ಮತ್ತು ಈ ನಗರಕ್ಕೆ ಸೌದೆ ಪ್ರಮಾಣವನ್ನು ಹೆಚ್ಚಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜೀವಿಜಯ (ಅರಣ್ಯ ರಾಜ್ಯಮಂತ್ರಿಗಳು) :—

(ಅ) ಮಂಗಳೂರು ನಗರದ ಪೂರೈಕೆಗೆ ಅಂದಾಜಿನಂತೆ 1,50,000 ಘನ ಮೀಟರು ಕಟ್ಟಿಗೆ ಬೇಕಾಗ ಬಹುದು.

(ಆ) (1)	ಪಡೀಲ್ ಡಿಪೋ	393·980 ಘ.ಮೀ.
(2)	ಅಳಿಕೆ ಡಿಪೋ	541·537 "
(3)	ಮುಂಕಿ ಸ್ಕ್ವಾಂಡ್ ಡಿಪೋ	533·618 "
(4)	ಉರ್ವಾಸ್ಟೋರ್ಸ್ ಡಿಪೋ	377·384 "
(5)	ನಂದಿಗುಡ್ಡ ಡಿಪೋ	332·992 "
		2179·511 "

(ಇ) ಮಂಗಳೂರು ನಗರದ ಪಡೀಲಿನಲ್ಲಿಯೂ ಸದ್ರಿ ನಿಗಮದ ಡಿಪೋ ಇರುತ್ತದೆ. ಅಲ್ಲದೆ ಪಡೀಲ್ ಪ್ರದೇಶವು ಮಂಗಳೂರು ಮಹಾನಗರ ಸಭೆಯ ವ್ಯಾಪ್ತಿಯೊಳಗೆ ಇರುತ್ತದೆ. ಆದುದರಿಂದ ಪಡೀಲಿಗೆ ಕಟ್ಟಿಗೆ ತೆಗೆದುಕೊಂಡು ಹೋಗುವುದರಿಂದ ನಗರದಿಂದ ಹೊರಗೆ ಕಟ್ಟಿಗೆ ತೆಗೆದುಕೊಂಡು ಹೋಗುವ ಪ್ರಶ್ನೆ ಉದ್ಭವಿಸುವುದಿಲ್ಲ.

(ಈ) ಮಂಗಳೂರು ನಗರದ ಡಿಪೋಗಳಿಗೆ ಮಂಗಳೂರು ಅರಣ್ಯ ವಿಭಾಗದಿಂದ ಹಾಗೂ ಕುಂದಾಪುರ ಅರಣ್ಯ ವಿಭಾಗದಿಂದ ಕಟ್ಟಿಗೆಯನ್ನು ಒದಗಿಸಲಾಗುತ್ತದೆ. ಅಲ್ಲದೆ ವಿದ್ಯಾರ್ಥಿ ನಿಲಯ, ದೇವಸ್ಥಾನ ಗಳು ಹಾಗೂ ಇತರ ಸಂಘ ಸಂಸ್ಥೆಗಳಿಗೆ ಮೇಲಾಧಿಕಾರಿಗಳ ಆದೇಶವನ್ನು ಪಡೆದು ಅವರ ಕೋರಿಕೆ ಯಂತೆ ಕಟ್ಟಿಗೆಯನ್ನು ಇಲಾಖಾ ಸಂಗ್ರಹಾಲಯಗಳಿಂದ ಪೂರೈಸಲಾಗುತ್ತಿದೆ. ಈ ರೀತಿ ನಗರಕ್ಕೆ ಸೌದೆ ಪ್ರಮಾಣ ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಂಡಿದೆ.

ವಿಷಯ : ಹೊನ್ನಾಳಿ ತಾಲ್ಲೂಕು ಸವಳಂಗ ಕೆರೆಗೆ ಕಾಲುವೆ ಮೂಲಕ ನೀರು ತರುವ ವಿಚಾರ.

ಪ್ರ. 100 (167) ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ) .— ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿ ಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಶಿವಮೊಗ್ಗ ತಾಲ್ಲೂಕು ಸೀಗೆಹಳ್ಳಿ ಪಿಕ್‌ಅಪ್‌ನಿಂದ ಹೊನ್ನಾಳಿ ತಾಲ್ಲೂಕು ಸವಳಂಗ ದೊಡ್ಡ ಕೆರೆ ಫೀಡರ್ ನಾಲೆ ತರಲು ಈ ಹಿಂದೆ ಅಂದಾಜು ತಯಾರಾಗಿ ಸಮೀಕ್ಷೆ ನಡೆದು ಚಾನಲ್ ಸಹಿತ ತೆಗೆದು ಕಾಡನ ಕೆರೆಗೆ (ಆಯನೂರು ಶಿರಿಗೆರೆ ಮಧ್ಯೆ) ಬೀಳಿಸದೆ ಬೇರೆ ಕಡೆಗೆ ತಿರುಗಿಸಿದ್ದರಿಂದ ಹೊನ್ನಾಳಿ ತಾಲ್ಲೂಕು ಸವಳಂಗ ದೊಡ್ಡ ಕೆರೆಯ ಆಚ್ಚುಕಟ್ಟುದಾರರಿಗೆ ನೀರಿಲ್ಲದೆ ತೊಂದರೆಯಾಗಿ ಅನ್ಯಾಯವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಇನ್ನು ಮುಂದಾದರೂ ಸರಕಾರದವರು ಈ ಬಗ್ಗೆ ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳುವರೇ ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು) .—

(ಅ) ಸೀಗೆಹಳ್ಳಿ ಪಿಕ್‌ಅಪ್‌ನಿಂದ ಸವಳಂಗ ಕೆರೆಗೆ ನೀರು ಪೂರೈಸಲು ಯೋಜಿಸಿರಲಿಲ್ಲ. ಆದ್ದರಿಂದ ಸವಳಂಗ ಕೆರೆಗೆ ನೀರು ಕೊಡುವ ಕಾಲುವೆಯನ್ನು ಬೇರೆ ಕಡೆ ತಿರುಗಿಸಿದೆ ಎಂಬ ಪ್ರಶ್ನೆ ಉದ್ಭವಿಸು ವುದಿಲ್ಲ.

(ಆ) ಮೇಲೆ ತಿಳಿಸಿರುವ ಉತ್ತರದಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.